ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: https://kptcl.karnataka.gov.in
ಇ-ಮೇಲ್ ವಿಳಾಸ:director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿ025521
ಕಂಪನಿ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು 560 009

ಕವಿಪ್ರನಿನಿ/ಬಿಕ5/6334/2014-15 ದಿನಾಂಕ: 21 MAY 2020

ಲಗತ್ತು: 1

"ಜರೂರು"

ಪ್ರಧಾನ ವ್ಯವಸ್ಥಾಪಕರು(ಆಡಳಿತ ಮತ್ತು ಮಾ.ಸಂ.),
ಬೆ.ವಿ.ಸ.ಕಂ./ಹು.ವಿ.ಸ.ಕಂ./ಮ.ವಿ.ಸ.ಕಂ./ಗು.ವಿ.ಸ.ಕಂ/ಚಾ.ವಿ.ಸ.ನಿ.ನಿ.
ಬೆಂಗಳೂರು/ಹುಬ್ಬಳ್ಳಿ/ಮಂಗಳೂರು/ಕಲಬುರಗಿ/ಮೈಸೂರು.

ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಕವಿಪ್ರನಿನಿ,
ಬೆಂಗಳೂರು/ತುಮಕೂರು/ಮೈಸೂರು/ಹಾಸನ/ಬಾಗಲಕೋಟೆ/ಕಲಬುರಗಿ.

ಮುಖ್ಯ ಇಂಜಿನಿಯರ್(ವಿ), ಎಸ್.ಎಲ್.ಡಿ.ಸಿ,
ಕವಿಪ್ರನಿನಿ, ಬೆಂಗಳೂರು.

ಆರ್ಥಿಕ ಸಲಹೆಗಾರರು(ಲೆಕ್ಕಗಳು ಮತ್ತು ಸಂಪನ್ಮೂಲ),
ಕವಿಪ್ರನಿನಿ, ಬೆಂಗಳೂರು.

ವ್ಯವಸ್ಥಾಪಕರು(ಆಂತರಿಕ ನಿರ್ವಹಣೆ), ನಿಗಮ ಕಾರ್ಯಾಲಯ,
ಕವಿಪ್ರನಿನಿ, ಬೆಂಗಳೂರು.

ವ್ಯವಸ್ಥಾಪಕರು(ಹಣಕಾಸು ಮತ್ತು ಲೆಕ್ಕಗಳು), ಕಾವೇರಿ ಭವನ,
ಕವಿಪ್ರನಿನಿ, ಬೆಂಗಳೂರು.

ಮಾನ್ಯರೇ,

**ವಿಷಯ:** https://kptcl.karnataka.gov.in=>eprasarana ದಲ್ಲಿ **"ಕವಿಪ್ರನಿನಿ ಹಾಗೂ ವಿಸಕಂಗಳ ಹುದ್ದೆ ಮತ್ತು ಸಿಬ್ಬಂದಿಗಳ ದತ್ತಾಂಶ"**ವನ್ನು ಇಂದೀಕರಿಸುವ ಬಗ್ಗೆ.

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಾಲಕಾಲಕ್ಕೆ ಕವಿಪ್ರನಿನಿ ಮತ್ತು ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ಕಾರ್ಯವ್ಯಾಪ್ತಿಯ ಕಛೇರಿಗಳ ಹುದ್ದೆ ಹಾಗೂ ಸಿಬ್ಬಂದಿಗಳ ಮಾಹಿತಿಗಳನ್ನು ಪಡೆಯಲು ಹಾಗೂ ಸರ್ಕಾರ/ಶಾಸಕಾಂಗ ಸಭೆ/ಮಂಡಳಿಗೆ ವರದಿಗಳನ್ನು ಒದಗಿಸಲು ಆನ್‌ಲೈನ್ ದತ್ತಾಂಶವನ್ನು ರಚಿಸಲಾಗಿದೆ.

ಮುಂದುವರೆದು ದಿನಾಂಕ:31.03.2020 ರಂತೆ **"ಕವಿಪ್ರನಿನಿ ಮತ್ತು ಎಸ್ಕಾಂಗಳ ಹುದ್ದೆ ಹಾಗೂ ಸಿಬ್ಬಂದಿಗಳ ದತ್ತಾಂಶ"**ದಲ್ಲಿ ಈಗಾಗಲೇ ಇರುವ ಪಾಸ್‌ವರ್ಡ್‌ನೊಂದಿಗೆ ಸದರಿ ಮಾಹಿತಿಗಳನ್ನು ದಿನಾಂಕ: 05.06.2020 ರ ಒಳಗೆ ನವೀಕರಿಸಿ ದಾಖಲಿಸಲು ಕೋರಿದೆ. ಪಾಸ್‌ವರ್ಡ್ ಸಂಬಂಧಿತ ಹಾಗೂ ದತ್ತಾಂಶದಲ್ಲಿ ಮಾಹಿತಿಯನ್ನು ನಮೂದಿಸುವ ತೊಂದರೆಗಳಿಗೆ ಸಂಬಂಧಿಸಿದ ಯಾವುದೇ ಸಂದೇಹ/ಸ್ಪಷ್ಟೀಕರಣದ ವಿಷಯವಾಗಿ ಸಂಬಂಧಪಟ್ಟ ವೇತನ ಬಟವಾಡೆ ಅಧಿಕಾರಿಗಳು ತಮ್ಮ ಮೊಬೈಲ್ ಸಂಖ್ಯೆಯೊಂದಿಗೆ admin@kptcl.com ಅಥವಾ manager.ar.kptcl@gmail.com ಗೆ ಇ-ಮೇಲ್ ಮೂಲಕ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ. ಉಲ್ಲೇಖಿತ ದತ್ತಾಂಶದಲ್ಲಿ ಮಾಹಿತಿಯನ್ನು ಭರ್ತಿ ಮಾಡಲು ಸೂಚನೆಗಳನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ವಿವರಿಸಲಾಗಿದೆ.

ತಮ್ಮ ವಿಶ್ವಾಸಿ,

18/5/2020

ನಿರ್ದೇಶಕರು(ಆಡಳಿತ ಮತ್ತು ಮಾ.ಸಂ)
ಕವಿಪ್ರನಿನಿ

ಪ್ರತಿಯು ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ:

1. ಅ.ಇಂ(ವಿ), ಐ.ಟಿ & ಎಮ್.ಐ.ಎಸ್, ನಿಗಮ ಕಾರ್ಯಾಲಯ, ಕವಿಪ್ರನಿನಿ, ಬೆಂಗಳೂರು.
2. ಉಪ ಲೆಕ್ಕ ನಿಯಂತ್ರಣಾಧಿಕಾರಿ(ಐ.ಟಿ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಬೆಂಗಳೂರು.

ಅನುಬಂಧ

**ಸೂಚನೆಗಳು**

1. ಸಂಬಂಧಿಸಿದ ಸಂಬಳ ಬಟವಾಡೆ ಅಧಿಕಾರಿಗಳ ಹೆಸರು, ಇ-ಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ಸರಿಯಾಗಿ ನಮೂದಿಸತಕ್ಕದ್ದು.
2. ಪ್ರತಿ ನೌಕರರ ಮೂಲ ವೇತನವನ್ನು ದಿನಾಂಕ: 01.04.2020 ರಂತೆ ನಮೂದಿಸಬೇಕು(ದಿನಾಂಕ: 31.03.2020 ರಂದು ನೌಕರನು ನಿವೃತ್ತಿ ಹೊಂದಿದ್ದಲ್ಲಿ ದಿನಾಂಕ: 31.03.2020 ರಂತೆ ಪರಿಷ್ಕೃತ ಮೂಲ ವೇತನವನ್ನು ನಮೂದಿಸಬೇಕು).
3. ಪ್ರತಿಯೊಬ್ಬ ನೌಕರನ ನೇಮಕಾತಿ ಪ್ರಾಧಿಕಾರವನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು. ಉದಾಹರಣೆಗೆ.
   ಅ. ಪವರ್‌ಮ್ಯಾನ್- ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಉಡುಪಿ.
   ಆ. ಕಿರಿಯ ಸಹಾಯಕ- ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಬೆಳಗಾವಿ.
   ಇ. ಕಿರಿಯ ಇಂಜಿನಿಯರ್(ವಿ)-ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ರಾಯಚೂರು.
   ಈ. ಕಾರ್ಯನಿರ್ವಾಹಕ ಇಂಜಿನಿಯರ್(ವಿ)- ನಿರ್ದೇಶಕರು(ಆಡಳಿತ ಮತ್ತು ಮಾ.ಸಂ), ಕವಿಪ್ರನಿನಿ, ಬೆಂಗಳೂರು.
4. ಪ್ರತಿಯೊಬ್ಬ ನೌಕರನ ಪ್ಯಾನ್ ಹಾಗೂ ಆಧಾರ್ ಸಂಖ್ಯೆಯನ್ನು ಪಡೆದು ನಮೂದಿಸಬೇಕು.
5. ಪ್ರತಿಯೊಬ್ಬ ನೌಕರನ ವರ್ಗ, ಜಾತಿ, ಉಪಜಾತಿ ಹಾಗೂ ಧರ್ಮದ ಮಾಹಿತಿಯನ್ನು ಸರಿಯಾಗಿ ನಮೂದಿಸಬೇಕು.
6. ಎಲ್ಲಾ ನೌಕರರು ಕವಿಪ್ರನಿನಿ ನೌಕರರು. ಆದಾಗ್ಯೂ ನೌಕರರನ್ನು ಕಂಪನಿಗಳು ನೇಮಿಸದ್ದಲ್ಲಿ, ನೌಕರನು ಕವಿಪ್ರನಿನಿ, ಬೆ.ವಿ.ಸ.ಕಂ, ಮ.ವಿ.ಸ.ಕಂ, ಹು.ವಿ.ಸ.ಕಂ, ಗು.ವಿ.ಸ.ಕಂ ಅಥವಾ ಚಾ.ವಿ.ಸ.ನಿ.ನಿ ನೌಕರನೆಂದು ಸ್ಪಷ್ಟವಾಗಿ ನಮೂದಿಸಬೇಕು.
7. ನೌಕರನನ್ನು ನೇರ ನೇಮಕಾತಿ ಅಡಿಯಲ್ಲಿ ನೇಮಕ ಮಾಡಲಾಗಿದ್ದಲ್ಲಿ, ನೌಕರನನ್ನು ಹೈದರಾಬಾದ್ ಕರ್ನಾಟಕ ಮಿಸಲಾತಿಯಡಿಯಲ್ಲಿ ನೇಮಕ ಮಾಡಲಾಗಿದೆಯೇ ಎಂದು ನಮೂದಿಸತಕ್ಕದ್ದು.
8. ಎಲ್ಲಾ ನೌಕರರಿಗೆ ಸಂಬಂಧಿಸಿದಂತೆ, ನೌಕರರು ಹೈ-ಕ ಪ್ರದೇಶಕ್ಕೆ ಸೇರಿದವರಾಗಿದ್ದಾರೆಯೇ ಮತ್ತು ಸೇವಾ ದಾಖಲೆಯ ಪ್ರಕಾರ ಸ್ಥಳೀಯ ವ್ಯಕ್ತಿ ಎಂದು ಪ್ರಮಾಣೀಕರಿಸಲಾಗಿದೆಯೇ? ಅಥವಾ ಸಹಾಯಕ ಆಯುಕ್ತರಿಂದ ಅರ್ಹತಾ ಪ್ರಮಾಣ ಪತ್ರವನ್ನು ಪಡೆಯಲಾಗಿದೆಯೇ? ಎಂದು ಸ್ಪಷ್ಟವಾಗಿ ಸೂಚಿಸತಕ್ಕದ್ದು.
9. ಎಲ್ಲಾ ನೌಕರರ ವಿವರಗಳನ್ನು ನಮೂದಿಸಿ, ಪೂರ್ಣಗೊಳಿಸಿದ ನಂತರ ಸಂಬಂಧಿಸಿದ ವೇತನ ಬಟವಾಡೆ ಅಧಿಕಾರಿಯು ಈ ವಿವರಗಳನ್ನು ಮುದ್ರಿಸಿ ವೇತನ ವಿತರಣಾ ಕಛೇರಿಯಲ್ಲಿಯೇ ಉಳಿಸಿಕೊಳ್ಳತಕ್ಕದ್ದು.
10. ಒಂದು **Data entry completion report** ಅನ್ನು ದತ್ತಾಂಶದಲ್ಲಿ ಸೃಜಿಸಿ ಇದನ್ನು ಸಹ ಮುಂದಿನ ದಾಖಲೆಗಾಗಿ ಕಛೇರಿಯಲ್ಲಿಯೇ ಉಳಿಸಿಕೊಳ್ಳತಕ್ಕದ್ದು.